ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 06.02.2025**

<u>ಪಾಟೀ ಸವಾಲು </u>: ಆರೋಪಿ ಪರಃ ಶ್ರೀಮತಿ ಎಸ್ ಟಿ ಎ ವಕೀಲರಿಂದಃ

ನಾನು 2 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕೃಷಿ ಕೆಲಸ ಮಾಡುತ್ತಿದ್ದೇನೆ. ಕೃಷಿ ಕೆಲಸದಿಂದ ಸುಮಾರು 5 ರಿಂದ 6 ಲಕ್ಷ ವಾರ್ಷಿಕ ಆದಾಯ ಬರುತ್ತದೆ. ಅದನ್ನು ಹೊರತುಪಡಿಸಿ ಬೇರೆ ಆದಾಯ ಇರುವುದಿಲ್ಲ. 2 ಎಕ್ರೆ ಅಡಿಕೆ ಕೃಷಿ ಇದೆ. ವರ್ಷಕ್ಕೆ ಒಂದು ಬೆಳೆ ಬರುತ್ತದೆ. ಅಡಿಕೆಯನ್ನು ಮೂಡಬಿದ್ರೆ ಅಂಗಡಿಗೆ ಮಾರಾಟ ಮಾಡುತ್ತೇನೆ. ಮಾರಾಟ ಮಾಡಿದ ಬಗ್ಗೆ ರಶೀದಿಯನ್ನು ನೀಡಿರುತ್ತಾರೆ. 2018 ರಲ್ಲಿ ಮಾರಾಟ ಮಾಡಿ ಬಂದ ಲಾಭದ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ಒಂದು ಬ್ಯಾಂಕ್ ಖಾತೆ ಇದೆ. ಯಾವುದೇ ಸಾಲ ಇರುವುದಿಲ್ಲ. ಕೃಷಿ ತೋಟದಿಂದ ಬಂದ ಲಾಭಂಶದಿಂದ ಕೃಷಿ ವೆಚ್ಚ ಮತ್ತು ಮನೆ ಖರ್ಚು ನಡೆಯುತ್ತದೆ. ಬೇರೆಯವರೊಂದಿಗೆ ವ್ಯವಹಾರ ಮಾಡುವ ವ್ಯವಹಾರ ಜ್ಞಾನ ಇದೆ. ನಮ್ಮ ವಕೀಲರಿಗೆ ಈ ಪಿರ್ಯಾದಿನ ಬಗ್ಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಯಾವ ದಿನಾಂಕ ಮತ್ತು ವರ್ಷದಂದು ಆರೋಪಿಗೆ ಹಣ ನೀಡಿದ್ದು ಎಂದು ಪಿರ್ಯಾದಿ ಹಾಗೂ ನೋಟಿಸಿನಲ್ಲಿ ಕಾಣಿಸಲಾಗಿದೆ. 2013 ರಲ್ಲಿ ನನ್ನ ಮತ್ತು ಆರೋಪಿಯ ಪರಿಚಯ ಆಗಿರುತ್ತದೆ. ಯುವರಾಜ್ ಶೆಟ್ಟಿಯವರು ಆರೋಪಿಯ ಪರಿಚಯ ಮಾಡಿಕೊಟ್ಟಿರುತ್ತಾರೆ. ನನಗೆ ಮತ್ತು ಅರೋಪಿಗೆ ಆದ ವ್ಯವಹಾರದ ಬಗ್ಗೆ ಯುವರಾಜ್ ಶೆಟ್ಟಿಯವರು ಇರುತ್ತಿದ್ದರು.

ನಾನು ಆರೋಪಿಗೆ 2018 ರಲ್ಲಿ ಹಣ ನೀಡಿದ್ದು ನಿಖರ ದಿನಾಂಕ ನೆನಪಿಲ್ಲ. ನಮ್ಮ ಮನೆಯಲ್ಲಿ ಆರೋಪಿಗೆ ಹಣವನ್ನು ನಗದು ರೂಪದಲ್ಲಿ 4 ಲಕ್ಷ ವನ್ನು ನೀಡಿರುತ್ತೇನೆ. ನನ್ನ ತಾಯಿಯ ಜಾಗವನ್ನು ಮಾರಾಟ ಮಾಡಿ ಅದರಿಂದ ಬಂದ ಹಣವನ್ನು ಮನೆ ಕಟ್ಟ ಬೇಕೆಂದು ಇಟ್ಟು ಕೊಂಡಿದ್ದು ಆ ಹಣವನ್ನು ಆರೋಪಿಗೆ ನೀಡಿರುತ್ತೇನೆ. ಜಾಗ ಮಾರಾಟ ಮಾಡಿದ ಬಗ್ಗೆ ದಾಖಲೆ ಇದುದ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು. ನಾನು ನೀಡಿದ 500 ರೂ ಮುಖ ಬೆಲೆಯ 8 ಕಟ್ಟುಗಳಲ್ಲಿ ನೀಡಿರುತ್ತೇನೆ. ಆರೋಪಿಗೆ ಹಣ ನೀಡುವಾಗ ಮನೆಯಲ್ಲಿ ನಾನು ಒಬ್ಬನೆ ಇದ್ದೇನೆ. ಆರೋಪಿಯು 11.00 ಗಂಟೆಗೆ ಹಣ ತೆಗೆದುಕೊಂಡು ಹೋಗಲು ಬಂದಿರುತ್ತಾರೆ. ಸದ್ರಿ ವಿಚಾರವನ್ನು ಪಿರ್ಯಾದಿನಲ್ಲಿ ಕಾಣಿಸಿದ್ದೇನೆ. ನಾನು ಆರೋಪಿಗೆ ಹಣ ನೀಡುವಾಗ ಯಾವುದೇ ದಾಖಲೆ ಮಾಡಿಕೊಂಡಿರುವುದಿಲ್ಲ. ಆರೋಪಿಯು ಬ್ಯಾಂಕ್ ನಲ್ಲಿ ಸಾಲ ಬಾಕಿ ಇದೆ ಎಂದು ಹೇಳಿ ಅದನ್ನು ಪಾವತಿಸಿ ಮರು ಸಾಲ ಪಡೆದು ಹಿಂತಿರುಗಿಸುತ್ತೇನೆ ಎಂದು ಹೇಳಿ ಪಡೆದುಕೊಂಡಿರುತ್ತಾರೆ. ಆರೋಪಿಗೆ ಯಾವ ಬ್ಯಾಂಕ್ ನಲ್ಲಿ ಎಷ್ಟು ಸಾಲ ಇದೆ ಎಂದು ಕೇಳಿರುವುದಿಲ್ಲ. ಆರೋಪಿಯು ಒಂದರಿಂದ ಒಂದುವರೆ ತಿಂಗಳ ಒಳಗೆ ಹಣ ಮರುಪಾವತಿಸುವುದಾಗಿ ಹೇಳಿರುತ್ತಾರೆ. ಈ ವ್ಯವಹಾರವನ್ನು ಹೊರತುಪಡಿಸಿ ನನ್ನ ಮತ್ತು ಅರೋಪಿಯ ನಡುವೆ ಬೇರೆ ವ್ಯವಹಾರ ಇರಲಿಲ್ಲ. ಒಂದುವರೆ ತಿಂಗಳ ನಂತರ ಆರೋಪಿಯು ಹಣ ಹಿಂತಿರುಗಿಸಿರುವುದಿಲ್ಲ. ಆ ನಂತರ ನಾನು ಹಣದ ಬಗ್ಗೆ ವಿಚಾರಿಸಿದಾಗ ಆರೋಪಿಯು ಜೂನ್ 2018 ರಲ್ಲಿ ಚೆಕ್ ನ್ನು ನನ್ನ ಮನೆಗೆ ತಂದು ನೀಡಿರುತ್ತಾರೆ. ಆರೋಪಿಯು ಚೆಕ್ ತಂದು ನೀಡುವಾಗ ಬೇರೆ ಯಾರು ಇರಲಿಲ್ಲ. ಆರೋಪಿಯು ಚೆಕ್ ನ್ನು ಬರೆದು ತಂದು ಕೊಟ್ಟಿರುತ್ತಾರೆ. ಆರೋಪಿಯು ಏನು ಉದ್ಯೋಗ ಮಾಡುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಆರೋಪಿಯು ಸಹಿ ಮಾಡಿ ಚೆಕ್ ತಂದು ನೀಡಿರುತ್ತಾರೆ. ನಿಪಿ-1 ರಲ್ಲಿರುವ ಸಹಿಗೂ ಆರೋಪಿಯ ವಕಾಲಾತ್

ನಾಮೆಯಲ್ಲಿರುವ ಸಹಿಗೂ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯವಕಾಶ ನೀಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ